## ಶುದ್ಧ ಹಾಸ್ಯದ ‘ಪಾಪ ಪಾಂಡು’

‘ಪಾಪ ಪಾಂಡು’ ಧಾರಾವಾಹಿಯ ಒಂದೊಂದು ದೃಶ್ಯವೂ ಹಾಸ್ಯಭರಿತವಾಗಿದೆ. ಎಲ್ಲಿಯೂ ಅಶ್ಲೀಲ ಸಂಭಾಷಣೆಯಿಲ್ಲ. ದ್ವಂದ್ವಾರ್ಥದ ದುರ್ವಾಸನೆಯಿಲ್ಲ. ವಿಪರ್ಯಾಸವೆಂದರೆ ಅದೇ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಮಜಾ ಭಾರತ’ದಲ್ಲಿ ಅಶ್ಲೀಲ, ಅಸಭ್ಯ ಹಾಗೂ ದ್ವಂದ್ವಾರ್ಥ ಸಂಭಾಷಣೆಗಳು ವಾಕರಿಕೆ ತರಿಸುತ್ತಿವೆ. ಕಿರುತೆರೆಗೂ ಸೆನ್ಸಾರ್ ಮಂಡಳಿಯ ಅವಶ್ಯಕತೆಯಿದೆ.

–ಪಿ.ಜೆ.ರಾಘವೇಂದ್ರ, ಮೈಸೂರು

## ಕನ್ನಡಿಗರ ಹೆಮ್ಮೆ ‘ಥಟ್ ಅಂತ ಹೇಳಿ’

ಚಂದನದಲ್ಲಿ ಡಾ.ನಾ.ಸೋಮೇಶ್ವರ ಅವರು ನಡೆಸಿಕೊಡುವ ‘ಥಟ್ ಅಂತ ಹೇಳಿ’ ಕನ್ನಡಿಗರು ಹೆಮ್ಮೆ ಪಡುವಂತಹ ಕಾರ್ಯಕ್ರಮ. ಎಲ್ಲ ತಲೆಮಾರಿನವರು, ಕುಟುಂಬದ ಎಲ್ಲಾ ಸದಸ್ಯರು ಚರ್ಚೆ ಮಾಡುತ್ತ ನೋಡುವ ಏಕೈಕ ಕಾರ್ಯಕ್ರಮವಿದು ಎಂದರೆ ತಪ್ಪಾಗದು.

ಇದು ಪ್ರೇಕ್ಷಕನ ಕನ್ನಡ ಶಬ್ದ ಭಂಡಾರವನ್ನು ವೃದ್ಧಿಗೊಳಿಸುವುದರ ಜೊತೆಗೆ ಇಂದಿನ ಅವಶ್ಯಕತೆಯಾದ ಸಾಮಾನ್ಯ ಜ್ಞಾನವನ್ನು ಹೆಚ್ಚಿಸುತ್ತದೆ. ಮರೆತು ಹೋದ ಕನ್ನಡದ ಅನೇಕ ಪದಗಳು, ನುಡಿಗಟ್ಟುಗಳು, ಗ್ರಾಮೀಣ ಬದುಕಿನ ಹಾಗೂ ಹಳೆಯ ತಲೆಮಾರಿನ ಸಾಹಿತ್ಯ ಈ ಕಾರ್ಯಕ್ರಮದ ಮೂಲಕ ಮರು ಜನ್ಮ ಪಡೆಯುತ್ತಿರುವುದು ಶ್ಲಾಘನೀಯ.

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## ಮಕ್ಕಳ ಕಾರ್ಯಕ್ರಮ ಹೆಚ್ಚಾಗಲಿ

ಇತ್ತೀಚೆಗೆ ರೇಡಿಯೋದಲ್ಲಿ ‘ಕಣಜ’ ಎನ್ನುವ ಕಾರ್ಯಕ್ರಮ ಶುರುವಾಗಿದೆ. ಈ ಕಾರ್ಯಕ್ರಮದಲ್ಲಿ ಕಾದಂಬರಿಯನ್ನು ಓದುವುದು, ಶ್ರೋತೃಗಳು ಆಲಿಸುವುದು. ರೇಡಿಯೋ ಬರೀ ಶ್ರವಣ ಮಾಧ್ಯಮ. ಆದರೆ ಯಾವುದೇ ಭಾಷೆಯ ಮಾತು, ಹಾಡುಗಳನ್ನು ಮರಳಿ ಮರಳಿ ಕೇಳುತ್ತಿದ್ದರೆ ನಮ್ಮ ನಾಲಿಗೆಯಲ್ಲಿ ಮುದ್ರಣಗೊಳ್ಳುತ್ತದೆ. ಮಕ್ಕಳಿಗಂತೂ ತುಂಬಾ ಒಳ್ಳೆಯದು. ಟಿವಿ ಬಂದ ನಂತರ ಈ ರೀತಿ ಕಲಿತುಕೊಳ್ಳುವ ಸ್ವಾಭಾವಿಕ ಆಸಕ್ತಿ ಮತ್ತು ಕೌಶಲ ಬಹುತೇಕ ಅದೃಶ್ಯವಾಗಿದೆ. ಮಕ್ಕಳಿಗಾಗಿ ಒಳ್ಳೆಯ ಕಾರ್ಯಕ್ರಮಗಳೇ ಇಲ್ಲ. ಮಕ್ಕಳಿಂದ ಕತೆ, ಕವಿತೆ, ನಾಟಕಗಳನ್ನು ಓದಿಸುವುದು ಮತ್ತು ಆಡಿಸುವುದು ಹೆಚ್ಚಾಗಬೇಕು. ಮಕ್ಕಳು ವಾಗ್ಮಿಗಳಾಗುವ ದಾರಿ ತೋರಿಸಬೇಕು.

–ವೀಣಾಶಂಕರ್, ಬೆಂಗಳೂರು

ವಾರದ ಪತ್ರ

## ಗಟ್ಟಿ ವ್ಯಕ್ತಿತ್ವದ ಪಾತ್ರಗಳಿರಲಿ

ಮನಃಶಾಸ್ತ್ರಜ್ಞರ ಪ್ರಕಾರ ಬಾಲ್ಯದಲ್ಲಿ ಹೆಚ್ಚು ಅವಮಾನ, ಹಿಂಸೆ, ಕ್ರೌರ್ಯಕ್ಕೆ ಒಳಗಾದ ಯಾವುದೇ ಮಗು ಬೆಳೆದು ದೊಡ್ಡದಾದ ಮೇಲೆ ಬೇರೆಯವರಿಗೆ ಹಿಂಸೆ ಕೊಡುವುದು, ವಂಚನೆ ಮೊದಲಾದ ಗುಣಗಳನ್ನು ಬೆಳೆಸಿಕೊಳ್ಳುವ ಸಾಧ್ಯತೆ ಹೆಚ್ಚು. ಆದರೆ ನಮ್ಮ ವಿವಿಧ ಕನ್ನಡ ಚಾನೆಲ್‌ಗಳಲ್ಲಿ ಪ್ರಸಾರವಾಗುವ ಮುದ್ದುಲಕ್ಷ್ಮಿ, ವಿದ್ಯಾ ವಿನಾಯಕದಲ್ಲಿನ ವಿದ್ಯಾ, ಕಮಲಿ, ಮೊದಲಾದ ಸ್ತ್ರೀ ಪಾತ್ರಗಳು ಅತಿಯಾದ ಮುಗ್ಧತೆ, ಒಳ್ಳೆಯತನ, ಪರೋಪಕಾರ, ತಾವೇ ಮೋಸ ಹೋಗುವುದು ಇವೇ ಮೊದಲಾದ ಗುಣಗಳನ್ನು ಹೊಂದಲು ಹೇಗೆ ಸಾಧ್ಯ? ಬಾಲ್ಯದಲ್ಲಿ ನೋವು ಅನುಭವಿಸಿದರೂ ಮುಂದೆ ಗಟ್ಟಿಯಾದ ವ್ಯಕ್ತಿತ್ವನ್ನಾದರೂ ಬೆಳೆಸಿಕೊಂಡು ಸಮಾಜಕ್ಕೆ ಮಾದರಿಯಾಗುವಂತಹ ಸ್ತ್ರೀ ಪಾತ್ರಗಳನ್ನು ಸೃಷ್ಟಿಸಬಾರದೇಕೆ?

–ಎಚ್.ಎಸ್. ಶೋಭ ಕುಮಾರಸ್ವಾಮಿ, ಚಿಕ್ಕಮಗಳೂರು

## ಸೂಪರ್ ‘ಕನ್ನಡ ಕೋಗಿಲೆ’

ಕಲರ್ಸ ಸೂಪರ್‌ನಲ್ಲಿ ವಾರಕ್ಕೆ ಎರಡು ದಿನ ಪ್ರಸಾರವಾಗುವ ‘ಕನ್ನಡ ಕೋಗಿಲೆ’ ಯಲ್ಲಿ ಹಾಡುತ್ತಿರುವ ಎಲ್ಲಾ ಗಾಯಕರು ಉತ್ತಮವಾಗಿ ಹಾಡುತ್ತಿದ್ದಾರೆ. ಅದಕ್ಕೂ ಮಿಗಿಲಾಗಿ ತೀರ್ಪುಗಾರರು ಉತ್ತಮ ಸಲಹೆ ನೀಡುತ್ತಿದ್ದಾರೆ. ನ್ಯೂನತೆ ಕಂಡು ಹಿಡಿದು ವೀಕ್ಷಕರನ್ನು ರಂಜಿಸುವುದರ ಜೊತೆಗೆ ಸಾಧು ಕೋಕಿಲ ಹಾಗೂ ಅರ್ಚನ ಉಡುಪ ಉದಾಹರಣೆ ಸಮೇತ ಉತ್ತಮ ಅಂಕ ನೀಡುತ್ತಿದ್ದಾರೆ.

–ಅಂಚೆ ಸುಬ್ರಹ್ಮಣ್ಯ, ಕೊಪ್ಪ

## ಖುಷಿ ಕೊಡುವ ‘ಮಗಳು ಜಾನಕಿ’

ಕಿರುತೆರೆಯ ಗದ್ದಲದಿಂದ ಮುಕ್ತರಾಗಿ ವಿಶಾಲ ತೆರೆಯ ‘ಕಾಫಿ ತೋಟ’ದಲ್ಲಿ ಸದ್ದಿಲ್ಲದೆ ಕಳೆದು ಹೋಗಿದ್ದ ನಮ್ಮ ಸೀತಾರಾಂ ವರ್ಷಗಳ ನಂತರ ‘ಮಗಳು ಜಾನಕಿ’ಯ ಮೂಲಕ ಅಭಿಮಾನಿಗಳಿಗೆ ಮತ್ತೆ ಸಿಕ್ಕಿಬಿಟ್ಟಿದ್ದಾರೆ. ಅದೂ ‘ಮನ್ವಂತರ’, ‘ಮಾಯಾಮೃಗ’ಗಳ ಕಾಲದ ಸೃಜನಶೀಲತೆ, ನವ ಚೈತನ್ಯಗಳೊಂದಿಗೆ! ತುಂಬಾ ತುಂಬಾ ಖುಷಿ ಎನಿಸುತ್ತಿದೆ, ಎತ್ತಿ ಎಸೆಯಬೇಕೆನಿಸಿದ್ದ ಮೂರ್ಖರ ಪೆಟ್ಟಿಗೆಯ ಮುಂದೆ ಮತ್ತೆ ಕೂರುವ ಉತ್ಸಾಹ, ಕಾತುರತೆ ಮೂಡುತ್ತಿದೆ.

–ಮೀರಾ ಮೋಹನ್, ಬೆಂಗಳೂರು; ಕೆ.ಎನ್.ಅಂಜನಾ, ಚಾಮರಾಜನಗರ

## ಸುಶ್ರಾವ್ಯ ಶೀರ್ಷಿಕೆ ಗೀತೆ

ಕನ್ನಡ ಸೂಪರ್ ಕಲರ್ಸ್ ವಾಹಿನಿಯಲ್ಲಿ ಟಿ.ಎನ್. ಸೀತಾರಾಂ ಅವರ ಹೊಸ ಧಾರಾವಾಹಿ ‘ಮಗಳು ಜಾನಕಿ’ ಪ್ರಸಾರವಾಗುತ್ತಿದೆ. ಅವರು ಟಿವಿ ಧಾರಾವಾಹಿ ನಿರ್ದೇಶನದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ನಿರ್ದೇಶಕರು. ಅವರು ಪ್ರತಿಯೊಂದು ಧಾರಾವಾಹಿಯಲ್ಲೂ ಕನ್ನಡದ ಹಿರಿಯ ಕವಿಗಳ ಭಾವಗೀತೆಗಳನ್ನು ಅಳವಡಿಸಿಕೊಂಡು ಗೀತೆಗಳ ಭಾವ ತೂಕವನ್ನು ಹೆಚ್ಚಿಸಿ ಜನಪ್ರಿಯಗೊಳಿಸಿದ್ದು ಎಲ್ಲರಿಗೂ ತಿಳಿದ ಸಂಗತಿ. ಈಗ ಪ್ರಸಾರವಾಗುತ್ತಿರುವ ಧಾರಾವಾಹಿಯಲ್ಲಿ ಕನ್ನಡದ ಪ್ರಸಿದ್ಧ ಕವಿ ಎಚ್.ಎಸ್. ವೆಂಕಟೇಶಮೂರ್ತಿಯವರ ಗೀತೆಯನ್ನು ಆಯ್ದುಕೊಂಡಿದ್ದಾರೆ. ‘ಊರ ಸೇರಬಹುದೇ... ಮಗಳು ಜಾನಕಿ’ ಎಂಬ ಗೀತೆಯನ್ನು ಕನ್ನಡದ ಖ್ಯಾತ ಗಾಯಕರಾದ ವಿಜಯಪ್ರಕಾಶ್ ಭಾವಪೂರ್ಣವಾಗಿ ಹಾಡಿದ್ದು ಮುದ ನೀಡುತ್ತದೆ.

–ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಮರು ಪ್ರಸಾರವಾಗಲಿ

ಸುದ್ದಿ ವಾಹಿನಿಗಳಲ್ಲಿ ಪ್ರಸಾರವಾಗುವ ಕೆಲವು ಒಳ್ಳೆಯ ಕಾರ್ಯಕ್ರಮ ಅನೇಕ ವೀಕ್ಷಕರಿಗೆ ನೋಡಲು ಸಿಗುವುದಿಲ್ಲ. ಬಿಗ್–3, ಬೆಳಕು, ಗುಡಿಯ ನೋಡಿರಣ್ಣ ಇಂತಹ ಕಾರ್ಯಕ್ರಮಗಳನ್ನು ಅದೇ ದಿನ ರಾತ್ರಿ ಮರುಪ್ರಸಾರ ಮಾಡಲಿ. ಏಕೆಂದರೆ ನಾವು ಕೆಲಸಕ್ಕೆ ಹೋಗುವ ಸಮಯದಲ್ಲಿ ಇವುಗಳು ಪ್ರಸಾರವಾಗುತ್ತಿವೆ.

–ಎಸ್. ನರೇಂದ್ರ ನಾಯಕ್, ಗಂಗೊಳ್ಳಿ

## ‘ಕಿನ್ನರಿ’ ಮುಗಿಸಿ

‘ಕಿನ್ನರಿ’ ಧಾರಾವಾಹಿ ಏಕೆ ಹೀಗೆ ಸಾಗುತ್ತಿದೆ ! ಮೊದಲ ಭಾಗದಲ್ಲಿ ‘ಕಿರು ಮಣಿ’ಯದ್ದು ಅರಳು ಹುರಿದ ಹಾಗೆ ಮಾತು. ಎರಡನೇ ಭಾಗದಲ್ಲಿ ಅಜ್ಜಿಯದು ಅತಿಯಾಗಿತ್ತು. ಈಚೆಗೆ ಅವರು ಕಾಣಿಸಿಲ್ಲ. ಆದರೆ ತಿರುಳಿಲ್ಲದೆ ಸಾಗುತ್ತಿರುವ ‘ಕಿನ್ನರಿ’ಯೂ ಮುಗಿಯಲಿ.

–ಸೀತಾ ಕೇಶವ, ಸಿಡ್ನಿ